**ಸಾಕ್ಷಿಗೆ ದಿನಾಂಕ 24.6.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಆರ್.ಎಸ್ ವಕೀಲರಿಂದಃ

ಮೃತ ನಾಗರಾಜು ರವರು ತೀರಿಕೊಳ್ಳುವ ಮೊದಲು ಆಸ್ಪತ್ರೆಯಿಂದ ನಮಗೆ ಯಾವುದೆ ಎಂ.ಎಲ್.ಸಿ ವರದಿ ಬಂದಿರುವುದಿಲ್ಲ. ದೂರು ನೀಡಲು ತಡವಾಗಿರುವ ಬಗ್ಗೆ ದೂರಿನಲ್ಲಿ ನಮೂದಿಸಿರುತ್ತಾರೆ. ಸದರಿ ವಿಚಾರವಾಗಿ ನಾನು ತನಿಖೆಯನ್ನು ಮಾಡಿರುತ್ತೇನೆ. ನನ್ನ ತನಿಖೆಯಲ್ಲಿ ಆರೋಪಿಯು ಹಣವನ್ನು ನೀಡುತ್ತೇನೆ ಎಂದು ಹೇಳಿದ್ದರಿಂದ ದೂರು ನೀಡಲು ತಡವಾಗಿರುತ್ತದೆ ಎಂದು ಗೊತ್ತಾಗಿರುತ್ತದೆ. ಆ ಬಗ್ಗೆ ಪಿರ್ಯಾದುದಾರರು ಮತ್ತು ಸಾಕ್ಷಿದಾರರು ಹೇಳಿಕೆಯಲ್ಲಿ ಹೇಳಿರುತ್ತಾರೆ. ನಿಪಿ32 ಎಂ.ಎಲ್.ಸಿ ವರದಿಯಲ್ಲಿ ಲಕ್ಷಣಗಳು ಎಂಬ ಕಲಂ ನಲ್ಲಿ ಹಂಪಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಇಂಜಕ್ಷನ್ ನೀಡಿರುವ ಬಗ್ಗೆ ನಮೂದಾಗಿರುತ್ತದೆ ಎಂದರೆ ಸರಿ. ನಾನು ಹಂಪಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತನಿಖೆ ಮಾಡಿರುವುದಿಲ್ಲ. ಅದೇ ರೀತಿ ನಿಪಿ32 ಕ್ಕೆ ಲಗತ್ತಿಸಿರುವ ಕೇಸ್ ಶೀಟಿನಲ್ಲಿ ಹಂಪಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜ್ವರಕ್ಕೆ ಸಂಬಂಧಿಸಿದಂತೆ ಇಂಜಕ್ಷನ್ ಪಡೆದಿರುವ ಬಗ್ಗೆ ನಮೂದಾಗಿರುತ್ತದೆ ಎಂದರೆ ಸರಿ. ನಿಪಿ31 ರ ಎರಡನೇ ಪುಟದಲ್ಲಿ ಕಾರ್ಡಿಯೋ ಪಲ್ಮನರಿ ಅರೆಸ್ಟ್ ನಿಂದ ಮೃತಪಟ್ಟಿರುವ ಬಗ್ಗೆ ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅಂತಿಮ ಅಭಿಪ್ರಾಯವನ್ನು ಕೆ.ಆರ್.ಆಸ್ಪತ್ರೆಯ ವೈದ್ಯರಾದ ಚಾಸ36 ರವರು ನೀಡಿರುತ್ತಾರೆ ಎನ್ನುವರು. ನಾನು ಎಫ್.ಎಸ್.ಎಲ್ ವರದಿಯನ್ನು ನೋಡಿರುತ್ತೇನೆ. ಮೃತ ವ್ಯಕ್ತಿಯ ಶವವನ್ನು ಹೊರತೆಗೆದಾಗ ನಾನು, ಸಿಬ್ಬಂದಿಯವರು, ಪಂಚರು ಹಾಗೂ ಪಿರ್ಯಾದುದಾರರು ಇದ್ದರು. ಸಾಮಾನ್ಯವಾಗಿ ಹಳ್ಳಿಗೆ ಪೋಲಿಸರು ಹೋದಾಗ ಸಾರ್ವಜನಿಕರು ಸೇರುತ್ತಾರೆ ಎಂದರೆ ಸಾಕ್ಷಿದಾರರು ಭಯದ ಕಾರಣ ಬರುವುದಿಲ್ಲ ಎನ್ನುವರು. ನಾನು ಮಹಜರು ಮಾಡುವ ಬಗ್ಗೆ ಲಿಖಿತ ನೋಟಿಸನ್ನು ನೀಡಿದ್ದು, ಅದರಲ್ಲಿ ಮಹಜರು ಮಾಡುವ ಸಮಯವನ್ನು ನಮೂದಿಸಿರುತ್ತೇನೆ. ನನ್ನ ನೋಟಿಸಿನಲ್ಲಿ ಮಹಜರು ಮಾಡುವ ದಿನಾಂಕ ಹಾಗೂ ಸಮಯವನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸಾಕ್ಷ್ಯ ನಾಶ ಮಾಡಿದ್ದರಿಂದ ಕಲಂ 201 ಐಪಿಸಿ ಹಾಗೂ ಆರೋಪಿಯು ವೈದ್ಯನಲ್ಲದಿದ್ದರೂ ಸಹ ತಾನು ವೈದನೆಂದು ಸಾರ್ವಜನಿಕರಿಗೆ ಚಿಕಿತ್ಸೆ ನೀಡಿ ಮೋಸ ಮಾಡಿರುವುದರಿಂದ ಕಲಂ 419 ಐಪಿಸಿ ಯನ್ನು ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ಮೃತ ವ್ಯಕ್ತಿಯ ಶವಸಂಸ್ಕಾರವನ್ನು ಯಾರು ಮಾಡಿರುತ್ತಾರೆ ಎಂದು ನಾನು ತನಿಖೆಯನ್ನು ಮಾಡಿದ್ದು ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಶವಸಂಸ್ಕಾರವನ್ನು ಕುಟುಂಬದವರು ಮತ್ತು ಊರಿನವರು ಮಾಡಿರುವ ಬಗ್ಗೆ ಹೇಳಿಕೆ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಊರಿನವರು ಶವಸಂಸ್ಕಾರಕ್ಕೆ ಹೋಗಿರುವ ಬಗ್ಗೆ ಹೇಳಿಕೆ ನೀಡಿರುತ್ತಾರೆ ಎನ್ನುವರು. ಆರೋಪಿಗೆ ಸಂಬಂಧಿಸಿದೆ ಎಂದು ಹೇಳುವ ಕ್ಲಿನಿಕ್‌ಗೆ ಭೇಟಿ ನೀಡಿ ಮಹಜರನ್ನು ಮಾಡಿರುತ್ತೇನೆ. ಸದರಿ ಕ್ಲಿನಿಕಿಗೆ ಯಾವುದೇ ಹೆಸರಿರುವುದಿಲ್ಲ, ವಾಸದ ಮನೆಯಲ್ಲಿ ಕ್ಲಿನಿಕ್ ಇತ್ತು. ನಾನು ಘಟನ ಸ್ಥಳದ ಯಾವುದೇ ಪೋಟೋ ಮತ್ತು ವಿಡಿಯೋ ಮಾಡಿರುವುದಿಲ್ಲ. ಆ ರೀತಿ ಮಾಡಲು ಯಾವುದೇ ತೊಂದರೆ ಇರಲಿಲ್ಲ. ಆರೋಪಿಯು ಲ್ಯಾಬ್ ಟೆಕ್ನಿಶಿಯನ್ ಪದವಿ ಪಡೆದಿರುತ್ತಾರೆ ಎಂದರೆ ಸರಿ. ಅವರು ರಕ್ತ ಮತ್ತು ಯುರಿನ್ ಪರೀಕ್ಷೆಯನ್ನು ಮಾತ್ರ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮೃತ ವ್ಯಕ್ತಿಗೆ ಆರೋಪಿಯು ಯಾವುದೇ ಚಿಕಿತ್ಸೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ, ಹಂಪಾಪುರ ಇಲ್ಲಿ ಮೃತ ವ್ಯಕ್ತಿಯು ಚಿಕಿತ್ಸೆ ಪಡೆದಿರುವ ಬಗ್ಗೆ ನಮೂದಾಗಿದ್ದು, ಆರೋಪಿಯು ಮೃತ ವ್ಯಕ್ತಿಗೆ ಯಾವುದೇ ಚಿಕಿತ್ಸೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಘಟನೆಗೂ ಯಾವುದೇ ಸಂಬಂಧ ಇರುವುದಿಲ್ಲ, ಚಾಸ1 ರವರು ಆರೋಪಿಯಿಂದ ಹಣ ಪಡೆಯಲು ಸುಳ್ಳು ದೂರು ನೀಡಿದ್ದು, ನಾನು ಅವರಿಗೆ ಅನುಕೂಲ ಮಾಡಲು ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ನಿಜವಾಗಿ ಘಟನೆಯಾಗಿದ್ದಲ್ಲಿ ಕೂಡಲೇ ದೂರು ನೀಡುತ್ತಿದ್ದು, ತಡವಾಗಿ ದೂರು ನೀಡಿದ್ದರಿಂದ ಸದರಿ ಘಟನೆಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ